ಓ ಎಸ್ ನಂ. 94/2021

ಡಿ ಡಬ್ಲ್ಯೂ: 1

ದಿನಾಂಕ 14-06-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು: ವಾದಿ ಪರ: ಶ್ರೀ ಎಸ್ ಎನ್ ಜಿ ವಕೀಲರಿಂದ:</u>

ಸರ್ವೆ ನಂ.156 ರಲ್ಲಿ ಒಟ್ಟು 1 ಎಕರೆ 5 ಗುಂಟೆ ಜಮೀನು ಇದೆ. ಸಾಕ್ಷಿ ಮುಂದುವರೆದು ಸದರಿ ಆಸ್ತಿಯಲ್ಲಿ ಹಂಚಿಕೆಯಾಗಿ ನನಗೆ ೩ ಗುಂಟೆ ಜಮೀನು ಬಂದಿರುತ್ತದೆ ಎಂದು ನುಡಿದಿರುತ್ತಾರೆ. ನನ್ನ ತಂದೆ ಮತ್ತು ನನ್ನ ತಂದೆಯ ಸಹೋದರರ ನಡುವೆ 1975-76 ರಲ್ಲಿ ವಿಭಾಗವಾಗಿರುತ್ತದೆ. ಸದರಿ ದಾಖಲೆಯು ನೊಂದಣಿ ವಿಭಾಗ ಪತ್ರವಾಗಿರುತ್ತದೆ. ಸದರಿ ವಿಭಾಗ ಪತ್ರ ನನ್ನ ಬಳಿ ಇದೆ. ನನ್ನ ತಂದೆಗೆ ಒಟ್ಟು 4 ಜನ ಮಕ್ಕಳು. ಅವರೆಂದರೆ 1. ನಿಂಗಪ್ಪ 2. ಚಂದ್ರಶೇಖರಪ್ಪ ಎಂದರೆ ನಾನು 3. ಜಯಣ್ಣ 4. ಪ್ರಕಾಶ್. ನನ್ನ ತಂದೆ 2000 ನೇ ಇಸವಿಯಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆ ಮತ್ತು ಅವರ ಸಹೋದರರು ವಿಭಾಗ ಮಾಡಿಕೊಂಡಾಗ ನನ್ನ ತಂದೆಗೆ ಸರ್ವೆ ನಂ.156 ರಲ್ಲಿ 1 ಎಕರೆ ಚಿಲ್ಲರೆ ಬಂದಿರುತ್ತದೆ.

ನಾನು ಮತ್ತು ನನ್ನ ಸಹೋದರರು ವಿಭಾಗ ಮಾಡಿಕೊಂಡು ಸುಮಾರು 20 ವರ್ಷಗಳಾಗಿರುತ್ತವೆ. ವಿಭಾಗದಂತೆ ನಮ್ಮ ನಮ್ಮ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ. ವಿಭಾಗವಾದ ಸಮಯದಲ್ಲಿ ಒಂದು ಪಾಲುಪಟ್ಟಿ ಮಾಡಿದ್ದೇವು ಎಂದರೆ ಸರಿಯಲ್ಲ. ನಾನು ಮತ್ತು

ನನ್ನ ಸಹೋದರರು ಮಾಡಿಕೊಂಡ ವಿಭಾಗದ ಬಗ್ಗೆ ಯಾವುದೇ ಬರವಣಿಗೆಯಾಗಿರುವುದಿಲ್ಲ, ವಿಭಾಗದಂತೆ ಖಾತೆ ಮಾಡಿಕೊಂಡು ಅವರವರು ಸ್ವಾಧೀನ ಇದ್ದೇವೆ. ಸರ್ವೆ ನಂ.156/4 ದುರಸ್ಥಿಯಾದ ನಂತರ ಸರ್ವೆ ನಂ.156/8 ಎಂದು ಬದಲಾಗಿರುತ್ತದೆ.

ಸರ್ವೆ ನಂ.156/8 ರಲ್ಲಿ 13 ಗುಂಟೆ ಆಸ್ತಿಯು ವಾದಿಗೆ ಬಂದಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ನನ್ನ ಹಿಸ್ಸೆಗೆ ಬಂದಿದ್ದು, ಬೇರೆ ಆಸ್ತಿ ವಾದಿಗೆ ಹೋಗಿದೆ ಎಂದು ನುಡಿದಿರುತ್ತಾರೆ. ಸರ್ವೆ ನಂ.156/8 ರ ಆಸ್ತಿಯ ಖಾತೆ ನನ್ನ ಹೆಸರಿನಲ್ಲಿರುತ್ತದೆ. ವಾದಿಯ ಹೆಸರಿಗೆ ಸರ್ವೆ ನಂ.156/6 ರ ಆಸ್ತಿಯ ಖಾತೆ ಇರುತ್ತದೆ. ನನಗೆ ವಿಭಾಗದ ಮೂಲಕ ಬಂದ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ ಹಳ್ಳ, ಪಶ್ಚಿಮಕ್ಕೆ ಶಿವಪ್ಪ, ಉತ್ತರ ಮತ್ತು ದಕ್ಷಿಣಕ್ಕೆ ಬಸವರಾಜಪ್ಪ ಇವರುಗಳ ಆಸ್ತಿ ಇರುತ್ತದೆ. ನಾನು ಮತ್ತು ನನ್ನ ಸಹೋದರರು ವಿಭಾಗ ಮಾಡಿಕೊಳ್ಳುವ ಮೊದಲು ಸರ್ವೆ ನಂ.156/8 ರ ಆಸ್ತಿಯು ನನ್ನ ಹೆಸರಿಗೆ ಇತ್ತು. ನನ್ನ ಹೆಸರಿಗೆ ಖಾತೆ ಬಂದು ಸುಮಾರು 35-40 ವರ್ಷವಾಗಿರುತ್ತವೆ. ನನ್ನ ಹೆಸರಿಗೆ ಖಾತೆ ಬರುವ ಮೊದಲು ನನ್ನ ತಂದೆಯ ಹೆಸರಿಗೆ ಖಾತೆ ಇತ್ತು. ಸರ್ವೆ ನಂ.156/8 ರ ಆಸ್ತಿಯು ನನ್ನ ಹೆಸರಿಗೆ ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ. ಸಾಕ್ಷಿ ಮುಂದುವರೆದು ಹಳೆ ಸರ್ವೆ ನಂ.156/4 ಇತ್ತು ಎಂದು ನುಡಿದಿರುತ್ತಾರೆ.

ವಿಭಾಗವಾದ ನಂತರ ಸರ್ವೆ ನಂ.156/4 ದುರಸ್ಥಿಯಾದ ನಂತರ ಸರ್ವೆ ನಂ.156/8 ಎಂದು ಆದ ನಂತರ 2-3 ವರ್ಷಗಳ ಹಿಂದೆ ಅಳತೆ

ಮಾಡಿರುತ್ತೇವೆ. ಸರ್ವೆ ನಂ.156/8 ರಲ್ಲಿ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವ ಸಲುವಾಗಿ ಭೂ ಸ್ವಾಧೀನ ಅಧಿಕಾರಿಗಳು ಜಮೀನನ್ನು ಅಳತೆ ಮಾಡಿರುತ್ತಾರೆ. ಆ ರೀತಿ ಅಳತೆ ಮಾಡುವ ಸಮಯದಲ್ಲಿ ಭೂ ಸ್ವಾಧೀನ ಅಧಿಕಾರಿಗಳು ಸರ್ವೆ ನಂ.156/8 ರ ಆಸ್ತಿಯು ನನ್ನ ಹೆಸರಿನಲ್ಲಿದೆ, ಆದರೆ ಭೌತಿಕ ಸ್ವಾಧೀನ ವಾದಿ ಇದ್ದಾರೆಂದು ವರದಿಯಲ್ಲಿ ನಮೂದಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನೇ ಸ್ವಾಧೀನ ಇದ್ದೇನೆ ಎಂದು ನುಡಿದಿರುತ್ತಾರೆ. ಆ ದಿನ ಭೂ ಸ್ವಾಧೀನ ಅಧಿಕಾರಿಗಳು ಅಳತೆ ಮಾಡಿ ವರದಿ ತಯಾರಿಸಿದ್ದಕ್ಕೆ ನಾನು ಮತ್ತು ಅಕ್ಕ ಪಕ್ಕದ ಜಮೀನಿನವರು ಸಹಿ ಮಾಡಿರುತ್ತೇವೆ ಎಂದರೆ ನಿಜ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.